**ಜಯಗಳು ಆಗಲಿ ಅಪಜಯಗಳು ಹೋಗಲಿ**

ಜಯದೇವೀ ರಮಣಾ ಓಲಿಯಲಿ ಕೊಲೇ
ಜಯದೇವೀ ರಮಣಾ ಓಲಿಯಲಿ ನಮ್ಮ.
ವಿಜಯರಾಯರ ಕೀರ್ತಿ ಮರೇಯಲು ಕೊಲೇ
ದಸರಾಯರ ಕೀರ್ತಿ ಮೇರೇಯಲು ಕೊಲೇ ..

ಹರಿಯೇ ಸರ್ವೋತ್ತಮ ಹರಿಯೇ ಪರದೇವತೇ
ಹರರದಾಸರೇಂಬೊ ಬಿರುದನ ಕೊಲೇ
ಹರರದಾಸರೇಂಬೊ ಬಿರುದನ ಕೊಲೇ ಹೇಕ್ಕಾಲೇ
ಹಿರಿಬಾಗಿಲೋಳಗೇ ನುಡಿಸೇವು ಕೊಲೇ ..

ಪನ್ನಂಗ ಶಯನ ಸುಪರ್ಣ ವಾಹನ
ಸುಪರ್ಣ ವಾಹನ ಸುಖಪೂರ್ಣ ಕೊಲೇ .
ಸುಪರ್ಣ ವಾಹನ ಸುಖಪೂರ್ಣನಾದ
ಮೊಹನ ವಿಠ್ಠಲ ಕರಣಿಸು ಕೊಲೇ ..

ಕೊಲೇ ಕೊಲೇ ರಂಗ ಕೊಲು ಕೊಲೇ
ಕೊಲೇ ಕೊಲೇ ಕೃಷ್ಣ ಕೊಲು ಕೊಲೇ ..

**ಮೋದಲ್ ವಂದಿಪೇ**

ಮೋದಲ್ ವಂದಿಪೇ ನಿನಗೇ ಗಣನಾಥ

ಬಂದ ವಿಘ್ನ ಕಳೇಯೋ ಗಣನಾಥ

ಮೋದಲ್ ವಂದಿಪೇ ನಿನಗೇ ಗಣನಾಥ ..ಪ..

ಹಿಂದೇ ರಾವಣನು ಮದದಿಂದ ನಿನ್ನ ಪೂಜಿಸದೇ

ಸಂದ ರಣದಲ್ಲಿ ಗಣನಾಥ ..1..

ಮಾಧವನ ಆಜ್ಞೇಯಿಂದ ಧರ್ಮರಾಯ ಪೂಜಿಸಲು

ಸಾಧಿಸಿದ ರಾಜ್ಯ ಗಣನಾಥ ..2..

ಮನ್ನಳ ಮೂರುತಿ ಗುರು ರಂಗವಿಥಲನ ಪಾದ

ಹಿಂಗದೇ ಪಾಲಿಸೋ ಗಣನಾಥ ..3..

**ಶ್ರೀ ಜಗನ್ನಾಥದಾಸಾರ್ಯ ವಿರಚಿತ ಶ್ರೀ ಹರಿಕಥಾಮೃತಸರ**

**1. ಮಂಗಳಾಚರಣ ಸಂಧಿ**

ಹರಿಕ-ಥಾಮೃತ — ಸಾರ-ಗುರುಗಳ .

ಕರುಣ-ದಿಂದಾ — ಪನಿತು-ಪೇಳುವೆ .

ಪರಮ-ಭಗವದ್ — ಭಕ್ತ-ರಿದನಾ — ದರದಿ-ಕೇಳುವು-ದು .. ಪ ..

ಶ್ರೀರ-ಮಣಿ ಕರ — ಕಮಲ- ಪೂಜಿತ .

ಚಾರು- ಚರಣ ಸ — ರೋಜ- ಬ್ರಹ್ಮ ಸ- .

ಮೀರ- ವಾಣಿ ಫ — ಣೀಂದ್ರ- ವೀಂದ್ರ ಭ — ವೇಂದ್ರ- ಮುಖ ವಿನು-ತ .. ನೀರ-ಜ ಭವಾಂ — ಡೋದ-ಯ ಸ್ಥಿತಿ .

ಕಾರ-ಣನೆ ಕೈ — ವಲ್ಯ-ದಾಯಕ .

ನಾರ-ಸಿಂಹನೆ — ನಮಿಪೆ-ಕರುಣಿಪು — ದೆಮಗೆ-ಮಂಗಳ-ವ .. 1-1 ..

ಜಗದು-ದರನತಿ — ವಿಮಲ-ಗುಣರೂ- .

ಪಗಳ-ನಾಲೋ — ಚನದಿ- ಭಾರತ .

ನಿಗಮ-ತತಿಗಳ — ತಿಕ್ರ-ಮಿಸಿ ಕ್ರೀ — ಯಾ ವಿ-ಶೇಷಗ-ಳ ..

ಬಗೆ- ಬಗೆಯ-ನೂ — ತನವ- ಕಾಣುತ .

ಮಿಗೆ- ಹರುಷ-ದಿಂ — ಪೊಗಳಿ- ಹಿಗ್ಗುವ .

ತ್ರಿಗುಣ-ಮಾನಿ ಮ — ಹಾಲ-ಕುಮಿ ಸಂ — ತೈಸ-ಲನುದಿನ-ವು .. 1-2 ..

ನಿರುಪ-ಮಾನಂ — ದಾತ್ಮ-ಭವ ನಿ- .

ರ್ಜರ ಸ-ಭಾ ಸಂ — ಸೇವ್ಯ- ಋಜು ಗಣ- .

ದರಸೆ- ಸತ್ವ — ಪ್ರಚುರ-ವಾಣೀ — ಮುಖ ಸ-ರೋಜೇ-ನ ..

ಗರುಡ- ಶೇಷ ಶ — ಶಾಂಕ- ದಳ ಶೇ- .

ಖರರ- ಜನಕ ಜ — ಗದ್ದು-ರುವೆ ತ್ವ- .

ಚ್ಚರಣ-ಗಳಿಗಭಿ — ವಂದಿ-ಸುವೆ ಪಾ — ಲಿಪುದು- ಸನ್ಮತಿ-ಯ .. 1-3 ..

ಆರು- ಮೂರೆರ — ಡೊಂದು-ಸಾವಿರ .

ಮೂರೆ-ರಡು ಶತ — ಶ್ವಾಸ- ಜಪಗಳ .

ಮೂರು-ವಿಧ ಜೀ — ವರೊಳ-ಗಬ್ಜಜ — ಕಲ್ಪ- ಪರಿಯಂ-ತ ..

ತಾ ರ-ಚಿಸಿ ಸಾ — ತ್ವರಿಗೆ-ಸುಖ ಸಂ- .

ಸಾರ- ಮಿಶ್ರರಿ — ಗಧಮ- ಜನರಿಗ- .

ಪಾರ- ದುಃಖಗ — ಳೀವ-ಗುರು ಪವ — ಮಾನ- ಸಲಹೆ-ಮ್ಮ .. 1-4 ..

ಚತುರ- ವದನನ — ರಾಣಿ- ಅತಿರೋ- .

ಹಿತ-ವಿಮಲ ವಿ — ಜ್ಞಾನಿ- ನಿಗಮ .

ಪ್ರತತಿ-ಗಳಿಗಭಿ — ಮಾನಿ-ವೀಣಾ — ಪಾಣಿ- ಬ್ರಹ್ಮಾ-ಣಿ ..

ನತಿಸಿ- ಬೇಡುವೆ — ಜನನಿ- ಲಕ್ಷ್ಮೀ- .

ಪತಿಯ- ಗುಣಗಳ — ತುತಿಪು-ದಕೆ ಸ- .

ನ್ಮತಿಯ- ಪಾಲಿಸಿ — ನೆಲೆಸು-ನೀ ಮದ್ — ವದನ- ಸದನದ-ಲಿ .. 1-5 ..

ಕೃತಿ-ರಮಣ-ಪ್ರ — ದ್ಯುಮ್ನ – ನಂದನೆ .

ಚತುರ-ವಿಂಶತಿ — ತತ್ವ-ಪತಿ ದೇ- .

ವತೆಗ-ಳಿಗೆ ಗುರು — ವೆನಿಸು-ತಿಹ ಮಾ — ರುತನ- ನಿಜಪ-ತ್ನಿ .. ಸತತ-ಹರಿಯಲಿ — ಗುರುಗ-ಳಲಿ ಸ- .

ದ್ರತಿಯ-ಪಾಲಿಸಿ — ಭಾಗ-ವತ ಭಾ- .

ರತ ಪು-ರಾಣ ರ — ಹಸ್ಯ-ತತ್ವಗ — ಳರುಪು-ಕರುಣದ-ಲಿ .. 1-6 ..

ವೇದ-ಪೀಠ ವಿ — ರಿಂಚಿ- ಭವ ಶ- .

ಕ್ರಾದಿ- ಸುರ ವಿ — ಜ್ಞಾನ- ದಾಯಕ .

ಮೋದ- ಚಿನ್ಮಯ — ಗಾತ್ರ-ಲೋಕ ಪ — ವಿತ್ರ- ಸುಚರಿ-ತ್ರ .. ಭೇದ- ಭೇದ ವಿ — ಷಾದ- ಕುಟಿಲಾಂ- .

ತಾದಿ- ಮಧ್ಯ ವಿ — ದೂರ- ಆದಾ- .

ನಾದಿ- ಕಾರಣ — ಬಾದ-ರಾಯಣ — ಪಾಹಿ- ಸತ್ರಾ-ಣ .. 1-7 ..

ಕ್ಷಿತಿಯೊ-ಳಗೆ ಮಣಿ — ಮಂತ- ಮೊದಲಾ- .

ದತಿ ದು-ರಾತ್ಮರು — ಒಂದ-ಧಿಕ ವಿಂ- .

ಶತಿ ಕು-ಭಾಷ್ಯವ — ರಚಿಸೆ- ನಡುಮನೆ — ಯೆಂಬ- ಬ್ರಾಹ್ಮಣ-ನ .. ಸತಿಯ- ಜಠರದೊ — ಳವತ-ರಿಸಿ ಭಾ- .

ರತಿ ರ-ಮಣ ಮ — ಧ್ವಾಭಿ-ಧಾನದಿ .

ಚತುರ-ದಶ ಲೋ — ಕದಲಿ-ಮೆರೆದ — ಪ್ರತಿಮ-ಗೊಂದಿಸು-ವೆ .. 1-8 ..

ಪಂಚ- ಭೇದಾ — ತ್ಮಕ ಪ್ರ-ಪಂಚಕೆ .

ಪಂಚ- ರೂಪಾ — ತ್ಮಕನೆ- ದೈವಕ .

ಪಂಚ- ಮುಖ ಶ — ಕ್ರಾದಿ-ಗಳು ಕಿಂ — ಕರರು- ಶ್ರೀಹರಿ-ಗೆ .. ಪಂಚ- ವಿಂಶತಿ — ತತ್ವ- ತರತಮ .

ಪಂಚಿ-ಕೆಗಳನು — ಪೇಳ್ದ- ಭಾವಿ ವಿ-.

ರಿಂಚಿ- ಯೆನಿಪಾ — ನಂದ-ತೀರ್ಥರ — ನೆನೆವೆ-ನನುದಿನ-ವು .. 1-9 ..

ವಾಮ-ದೇವ ವಿ — ರಿಂಚಿ-ತನಯ ಉ- .

ಮಾ ಮ-ನೋಹರ — ಉಗ್ರ- ಧೂರ್ಜಟಿ ..

ಸಾಮ-ಜಾಜಿನ — ವಸನ- ಭೂಷಣ — ಸುಮನ-ಸೋತ್ತಂ-ಸ .. ಕಾಮ-ಹರ ಕೈ — ಲಾಸ- ಮಂ-ದಿರ .

ಸೋಮ-ಸೂರ್ಯಾ — ನಲ ವಿ-ಲೋಚನ .

ಕಾಮಿ-ತಪ್ರದ — ಕರುಣಿ-ಸೆಮಗೆ ಸ — ದಾ ಸು-ಮಂಗಳ-ವ .. 1-10 ..

ಕೃತ್ತಿ-ವಾಸನೆ — ಹಿಂದೆ- ನೀ ನಾ- .

ಲ್ವತ್ತು- ಕಲ್ಪ ಸ — ಮೀರ-ನಲಿ ಶಿ- .

ಷ್ಯತ್ವ- ವಹಿಸಖಿ — ಳಾಗ-ಮಾರ್ಥಗ — ಳೋದಿ- ಜಲಧಿಯೊ-ಳು .. ಹತ್ತು- ಕಲ್ಪದಿ–ತಪವ- ಗೈದಾ- .

ದಿತ್ಯ-ರೊಳಗು — ತ್ತಮನೆ-ನಿಸಿ ಪುರು- .

ಷೋತ್ತ-ಮನ ಪರಿ — ಯಂಕ- ಪದವ್ಯೆ — ದಿದೆಯೊ- ಮಹದೇ-ವ .. 1-11 ..

ಪಾಕ-ಶಾಸನ — ಮುಖ್ಯ- ಸಕಲ ದಿ- .

ವೌಕ-ಸರಿಗಭಿ — ನಮಿಪೆ- ಋಷಿಗಳಿ- .

ಗೇಕ-ಚಿತ್ತದಿ — ಪಿತೃಗ-ಳಿಗೆ ಗಂ — ಧರ್ವ- ಕ್ಷಿತಿಪರಿ-ಗೆ ..

ಆ ಕ-ಮಲನಾ — ಭಾದಿ- ಯತಿಗಳ .

ನೀಕ-ಕಾನಮಿ — ಸುವೆನು- ಬಿಡದೆ ರ- .

ಮಾಕ-ಳತ್ರನ — ದಾಸ-ವರ್ಗಕೆ — ನಮಿಪೆ-ನನವರ-ತ .. 1-12 ..

ಪರಿಮ-ಳವು ಸುಮ — ನದೊಳ-ಗನಲನು .

ಅರಣಿ-ಯೊಳಗಿ — ಪ್ಪಂತೆ- ದಾಮೋ- .

ದರನು- ಬ್ರಹ್ಮಾ — ದಿಗಳ- ಮನದಲಿ — ತೋರಿ- ತೋರದ-ಲೆ ..

ಇರುತಿ-ಹ ಜಗ — ನ್ನಾಥ- ವಿಠಲನ .

ಕರುಣ- ಪಡೆವ ಮು — ಮುಕ್ಷು- ಜೀವರು .

ಪರಮ- ಭಾಗವ — ತರನು- ಕೊಂಡಾ — ಡುವುದು- ಪ್ರತಿದಿನ-ವು .. 1-13 ..

.. ಇತಿ ಶ್ರೀ ಮಂಗಳಾಚರಣ ಸಂಧಿ ಸಂಪೂರ್ಣಂ .. .. ಶ್ರೀಕೃಷ್ಣಾರ್ಪಣಮಸ್ತು ..

.. ಶ್ರೀಃ ..

**ಬಾರಯ್ಯ ವೆನ್ಕಟರಮಣ**

ಬಾರಯ್ಯ ವೆನ್ಕಟರಮಣ ಭಕ್ತರ ನಿಧಿಯೆ (ಪ)

ತೋರೋ ನಿನ್ನಯ ದಯ ತೋಯ ಜಾಂಬಕನೆ (ಅ.ಪ)

ವೇದ ಗೋಚರ ಬಾರೋ ಆದಿ ಕಚ್ಚಪ ಬಾರೋ ಮೋದಸೂಕರ ಬಾರೋ ಸದಯಾ ನರಸಿಮ್ಹ ಬಾರೋ (ಚ.1)

ವಾಮನ ಭಾರ್ಗವ ಬಾರೋ ರಾಮಕೃಷ್ಣನೆ ಬಾರೋ ಪ್ರೇಮದ ಬುದ್ಧನೆ ಬಾರೋ ಸ್ವಾಮಿ ಕಲ್ಕಿ ನೀ ಬಾರೋ (ಚ.2)

ಅರವಿಂದ ನಾಭ ಬಾರೋ ಸುರರ ಪ್ರಭುವೇ ಬಾರೋ ಪುರುಹೂತ ವಂದ್ಯ ಬಾರೋ ಪುರಂದರ ವಿಟ್ಟಲ್ಲ ಬಾರೋ (ಚ.3)

**ಬಂದನೊ ಗೋವಿಂದ**

ಬಂದನೊ ಗೋವಿಂದ ಚಂದದಿ ಆನಂದ

ಸುಂದರಿಯ ಮಂದಿರಕ್ಕೆ ನಂದನಕಂದಾ ನಂದನಕಂದಾ ..

ಸುಂದರಾಕಾರ ನಂದ ಕಂದ ಗನ್Bಈರ ಇಂದು ವದನೆಯರ ಮುಖಗಳಿಂದ ನೋಡಿದ .

ತಂದ ಕುಸುಮಾ ಕರದಿಂದ ಮುಡಿಸಿದ ಬಂದನೋ ಗೋವಿಂದನೋ ಅರವಿಂದ ನಯನ ..

ಕಾನನಾದಲ್ಲಿ ಬಲುದೀನನಾಗಲಿ ವೇಣುನಾದವೋ ತಾ ಕೂಡಿಮೋದವೋ ..

ಜಾಣನಿವನು ಸುಮ ಬಾಣ ಪಿತನು

ಮಾನಿನಿ ಮನ ಗಳೊಲಿಯುವ ಗಾನ ಮಾಡುತ್ತಾ ..

ಓಡಿ ಬಂದರೋ ಬಲು ಬೇಡಿಕೊಂಡ್ಡರೋ ಗಾರುಡಿಕಾರನು ಅವರ ನೋಡಿ ಮೆರೆದರೊ ಲ್

ಮಾಡಿದ ಜಾಲ ವಾಸುದೇವ ವಿಟ್ಠಲಾ

ಮಾಡಿದ ಮನ ಮಾಡಿದ ತಾ ಕೂಡಿದ ನಾಗಾ ..

**ವೀರ ಸಿಂಹನೆ**

**ರಾಗ – ನಾಟಿ ತಾಳ – ಧ್ರುವ**

ವೀರ ಸಿಂಹನೆ ನಾರಸಿಂಹನೆ ದಯ ಪಾರಾ

ವಾರನೆ ಭಯ ನಿವಾರಣ ನಿರ್ಗುಣ

ಸಾರಿದವರ ಸಂಸಾರ ವೃಕ್ಷದ ಮೂಲ

ಬೇರರಿಸಿ ಕೀಳುವ ಬಿರಿದು ಭಯಂಕರ

ಘೋರವತಾರ ಕರಾಳವದನ ಅ-

ಘೋರ ದುರಿತ ಸಂಹಾರ ಮಾಯಾಕಾರ

ಕ್ರೂರದೈತ್ಯರ ಶೋಕ ಕಾರಣ ಉದುಭವ

ಈರೇಳು ಭುವನ ಸಾಗರದೊಡೆಯ

ಅರೌದ್ರನಾಮಕ ವಿಜಯ ವಿಠ್ಠಲ ನರಸಿಂಗ

ವೀರರ ಸಾತುಂಗ ಕಾರುಣ್ಯಪಾಂಗ || 1 ||

**ತಾಳ – ಮಟ್ಟ**

ಮಗುವನು ರಕ್ಕಸನು ಹಗಲಿರುಳು ಬಿಡದೆ

ಹಗೆಯಿಂದಲಿ ಹೊಯ್ದು ನಗಪನ್ನಗ ವನಧಿ

ಗಗನ ಮಿಗಿಲಾದ ಅಗಣಿತ ಬಾಧಿಯಲಿ

ನೆಗೆದು ಒಗದು ಸಾವು ಬಗೆದು ಕೊಲ್ಲುತಿರಲು ಹೇ

ಜಗದ ವಲ್ಲಭನೇ ಸುಗುಣಾನಾದಿಗನೆ

ನಿಗಮಾ ವಂದಿದತೆ ಪೊಗಳಿದ ಭಕುತರ

ತಗಲಿ ತೊಲಗನೆಂದೂ ಮಿಗೆ ಕೂಗುತಲಿರಲು

ಯುಗ ಯುಗದೊಳು ದಯಾಳುಗಳ ದೇವರದೇವ

ಯುಗಾದಿ ಕೃತನಾಮಾ ವಿಜಯ ವಿಠ್ಠಲ ಹೋ ಹೋ

ಯುಗಳ ಕರವ ಮುಗಿದು ಮಗುವು ಮೊರೆ ಇಡಲು || 2 ||

**ತಾಳ – ರೂಪಕ**

ಕೇಳಿದಾಕ್ಷಣದಲಿ ಲಾಲಿಸಿ ಭಕ್ತನ್ನ ಮೌಳಿ ವೇಗದಲಿ ಪಾಲಿಸುವೆನೆಂದು

ತಾಳಿಸಂತೋಷವ ತೂಳಿ ತುಂಬಿದಂತೆ

ಮೂಲೋಕದಪತಿವಾಲಯದಿಂದ ಸು

ಸ್ತೀಲ ದುರ್ಲಭ ನಾಮ ವಿಜಯ ವಿಠ್ಠಲ ಪಂಚ

ಮೌಳಿ ಮಾನವ ಕಂಭ ಸೀಳಿ ಮೂಡಿದ ದೇವ || 3 ||

**ತಾಳ – ಝಂಪೆ**

ಲಟಲಟಾ ಲಟಲಟಾ ಲಟಕಟಿಸಿ ವನಜಾಂಡ

ಕಟಹ ಪಟ ಪಟ ಪುಟುತ್ಕಟದಿ ಬಿಚ್ಚುತಲಿರಲು

ಪುಟ ಪುಟ ಪುಟನೆಗೆದು ಚೀರಿಹಾರುತ್ತ ಪ-

ಲ್ಕಟಾಕಟಾ ಕಟ ಕಡಿದು ರೋಷದಿಂದ

ಮಿಟಿ ಮಿಟಿ ಮಿಟನೆ ರಕ್ತಾಕ್ಷಿಯಲ್ಲಿ ನೋಡಿ

ತಟಿತ್ಕೋಟಿ ಊರ್ಭಟಗೆ ಅರ್ಭಟವಾಗಿರಲು

ಕುಟಿಲ ರಹಿತ ವ್ಯಕ್ತ ವಿಜಯ ವಿಠ್ಠಲ ಶಕ್ತ

ದಿಟಿ ನಿಟಿಲ ನೇತ್ರ, ಸುರಕಟಕ ಪರಿಪಾಲಾ || 4 ||

**ತಾಳ – ತ್ರಿವಿಡಿ**

ಬೊಬ್ಬಿರಿಯೇ ವೀರ ಧ್ವನಿಯಿಂದ ತನಿಗಿಡಿ

ಹಬ್ಬಿ ಮುಂಚೋಣಿ ಉರಿ ಹೊರಗೆದ್ದು ಸುತ್ತೆ

ಉಬ್ಬಸ ರವಿಗಾಗೆ ಅಬ್ಜ ನಡುಗುತಿರೆ

ಅಬ್ಧಿಸಪುತ ಉಕ್ಕಿ ಹೊರಚೆಲ್ಲಿ ಬರುತಿರೆ

ಅಬುಜ ಭವಾದಿಗಳು ತಬ್ಬಬ್ಬಿ ಗೊಂಡಾರಿ

ಅಬ್ಬರವೇನೆನುತ ನಭದ ಗೂಳೆಯು ತಗೆಯೆ

ಶಬ್ದ ತುಂಬಿತು ಅವ್ಯಾಕೃತಾಕಾಶ ಪರಿಯಂತ

ನಿಬ್ಬರ ತರುಗಿರಿ ಝರಿ ಝರಿಸಲು

ಒಬ್ಬರಿಗೊಶವಲ್ಲದ ನಮ್ಮಾ ವಿಜಯ ವಿಠ್ಠಲ

ಇಬ್ಬಗೆಯಾಗಿ ಕಂಭದಿಂದ ಪೊರಮಟ್ಟಾ || 5 ||

**ತಾಳ – ಅಟ್ಟ**

ಫಡಿಫಡಿಸುತ ಕೋಟಿ ಸಿಡಿಲು ಗಿರಿಗೆ ಬಂದು

ಹೊಡೆದಂತೆ ಚೀರಿ ಬೊಬ್ಬಿಡುತಲಿ ಲಂಘಿಸಿ

ಹಿಡಿದು ರಕ್ಕಸನ್ನ ಕೆಡಹಿ ಮಡುಹಿ ತುಡುಕಿ

ತೊಡೆಯ ಮೇಲಿರಿಸಿ ಹೇರೊಡಲ ಕೂರುಗುರದಿಂದ

ಪಡುವಲ ಗಡಲ ತಡಿಯ ತರಣಿಯ ನೋಡಿ

ಕಡುಕೋಪದಲ್ಲಿ ಸದಬಡಿದು ರಕ್ಕಸನ ಕೆಡಹಿ

ನಿಡಿಗರಳನು ಕೊರಳೆಡಿಯಲ್ಲಿ ಧರಿಸಿದ ಸಡಗರದ ದೈವ

ಕಡುಗಲಿ ಭೂಭೂವ ವಿಜಯ ವಿಠ್ಠಲ

ಪಾಲ್ಗಡಲೊಡೆಯಾ ಶರಣರ ವಡೆವೆ ವಡನೊಡನೆ || 6 ||

**ತಾಳ – ಆದಿ**

ಉರಿಮಸೆಗೆ ಚತುರ್ದಶ ಧರಣಿ ತಲ್ಲಣಿಸಲು

ಪರಮೇಷ್ಟಿ ಹರಸುರರು ಸಿರಿದೇವಿಗೆ ಮೊರೆಯಿಡಲು

ಕರುಣದಿಂದಲಿ ತನ್ನ ಶರಣನ್ನ ಸಹಿತ ನಿನ್ನ

ಚರಣಕ್ಕೆ ಎರಗಲು ಪರಮ ಶಾಂತನಾಗಿ

ಹರಹಿದೆ ದಯವನ್ನು ಸುರರು ಕುಸುಮ ವರುಷ

ಗರಿಯಲು ಭೇರಿ ವಾದ್ಯ ಮೊರೆ ಉತ್ತರರೆ ಎನುತ

ಪರಿಪರಿ ವಾಲಗ ವಿಸ್ತಾರದಿಂದ ಕೈಕೊಳ್ಳುತ್ತ

ಮೆರೆದು ಸುರರುಪದ್ರ ಹರಿಸಿ ಬಾಲಕನ ಕಾಯ್ದೆ

ಪರದೈವೆ ಗಂಭೀರಾತ್ಮ ವಿಜಯವಿಠ್ಠಲ ನಿಮ್ಮ

ಚರಿತೆ ದುಷ್ಟರಿಗೆ ಭೀಕರವೋ ಸಜ್ಜನ ಪಾಲ || 7 ||

**ಜತೆ**

ಪ್ರಹ್ಲಾದವರದ ಪ್ರಸನ್ನ ಕ್ಲೇಶಭಂಜನ್ನ

ಮಹಹವಿಷೆ ವಿಜಯವಿಠ್ಠಲ ನರಮೃಗವೇಷಾ || 8 ||

**ಸಿಮ್ಹರೂಪನಾದ ಶ್ರೀ ಹರೇ**

ಸಿಮ್ಹರೂಪನಾದ ಶ್ರೀ ಹರೇ ಹೆ ನಾಮಗಿರೀಶನೇ . (ಪ)

ಒಮ್ಮನದಿಂದ ನಿಮ್ಮನು ಭಜಿಪರ

ಸಮ್ಮತದಿಂದ ಕಾಯುವ ಶ್ರೀ ಹರಿ .. (ಅ.ಪ)

ತರಳನು ಕರೆಯೆ ಸ್ಥಂಬವು ಬಿರಿಯೆ

ತುಂಬು ಉಗ್ರವ ತೋರಿದನು .

ಕರುಳನು ಬಗೆದು [ತನ್]ಕೊರಳೊಳು ಇಟ್ಟು

ತರಳನ ಸಲಹಿದ ಶ್ರೀ ನರಸಿಮ್ಹನೆ .. (ಚ.1)

ಭಕ್ತರೆಲ್ಲ ಕೂಡಿ ಬಹು ದೂರ ಓಡಿ

ಪರಮ ಶಾಂತವನು ಬೇಡಿದರು .

ಕರೆದು ತನ್ ಸಿರಿಯ ತೊಡೆಯೊಳು ಕುಳೀಸಿದ

ಪರಮ ಹರುಷವ ತೊರಿದ ಶ್ರೀ ಹರಿ .. (ಚ.2)

ಜಯ ಜಯ ಜಯ ವೆಂದು ಹೂವನು ತಂದು

ಹರಿ ಹರಿ ಹರಿಯೆಂದು ಸುರರೆಲ್ಲ ಸುರಿಸೆ .

ಭಯ ನಿವಾರಣ ಭಾಗ್ಯ ಸ್ವರೂಪನೇ

ಪರಮ ಪುರುಷ ಶ್ರೀ ಪುರಂದರ ವಿಟ್ಠಲನೇ .. (ಚ.3)

**ಸಾಟಿಯುಂಟೆ**

ಸಾಟಿಯುಂಟೆ ಶ್ರೀನಿವಾಸನ ದಾಸ ಕೂಟದ ಮೇಳಕೆ ಬೂಟಕದ ಮಾತಲ್ಲ ಕೇಳಿರೋ ಭಜನೆ ಮಾಡುವ ತಾಳಕೆ..ಪ..

ವಾಸುದೇವನ ವರ್ಣಿಸಲು ಕಮಲಾಸನಾದಿ ಸುಧೇಂದ್ರರು

ದಾಸ ಜನರ ಸಮೂಹದಲೊಗವಾಸವಾಗುತ ನಲಿವರು

ಸೂಸುತಿಹ ಗಂಗಾದಿ ನದಿಗಳು ಬೇಸರದೆ ಬಂದಿರುವುವು ಕೇಶವನ ಕೊಂಡಾಡ ಧರೆಯೊಳು ಮಿಸಲಳಿಯದ ಮಧುರವು..1..

ಬಾರಿಸುತ ತಂಬೂರಿ ತಾಳವ ನಾರದರ ಸಂಸ್ಮರಿಸುತ

ಬೂರಿ ಕಿಣಿಕಿಣಿ ಮದ್ದಳೆಯ ಜಂಭಾರಿ ಸ್ವರದಿಂದರುಗುತ ಪಾರಿಜಾಕ್ಷನ ಪರಮ ಮಂಗಳ ಮೂರುತಿಯ ಮುಂದಿರಿಸುತ ಮಾರುತನ ಮತವರಿತು ಬಹು ಗಂಭೀರ ಸ್ವರದಿಂದರುಗುತ.2..

ಹಿಂದೆಗಳಿಸಿದ ಹಲವು ದುರಿತವು ಕುಂದುವುದು ನಿಮಿಷಾರ್ಧದೆ ಅಂದಿನಂದಿನ ದೋಷ ದುಷ್ಕೃತ ಒಂದು ನಿಲ್ಲದು ಕಡೆಯಲಿ ಇಂದಿರಾಧವ ಶೇಷ ಬೂಧರ ಮಂದಿರನು ತಾ ಹರುಷದಿ ಮುಂದೆ ನಲಿಯುತೆ ಮನಕೆ ಪೂರ್ಣಾನಂದವೀವನು ನಗುತಲಿ..3..

**ಬಿಡೆನೋ ನಿನ್ನಂಘ್ರಿ**

ಬಿಡೆನೋ ನಿನ್ನಂಘ್ರಿ ಶ್ರೀನಿವಾಸ

ಎನ್ನ ದುಡಿಸಿಕೊಳ್ಳಲೋ ಶ್ರೀನಿವಾಸ

ನಿನ್ನ ನುಡಿಯ ಜೋತೆಲ್ಲೋ ಶ್ರೀನಿವಾಸ

ನನ್ನ ನಡೆ ತಪ್ಪು ಕಾಯೋ ಶ್ರೀನಿವಾಸ ..1..

ಬಡಿಯೋ ಬೆನ್ನಲ್ಲಿ ಶ್ರೀನಿವಾಸ

ಎನ್ನ ಒಡಲ ಹೊಯ್ಯದಿರೂ ಶ್ರೀನಿವಾಸ

ನಾ ಬಡವ ಕಾಜೇಲೂ ಶ್ರೀನಿವಾಸ

ನಿನ್ನ ಒಡಲ ಹೂಕ್ಕೆನೂ ಶ್ರೀನಿವಾಸ್..2 ..

ಪಂಜು ಪಿಡಿವೇನೂ ಶ್ರೀನಿವಾಸ

ನಿನ್ನ ಎಂಜಲ ಬಳಿದುಂಬೆ ಶ್ರೀನಿವಾಸ

ನಾ ಸಂಜೆ ಉದಯಕೆ ಶ್ರೀನಿವಾಸ

ಕಾಳಜಿಯ ಪಿಡಿವೆ ಶ್ರೀನಿವಾಸ ..3..

ಸತ್ತಿಗೆ ಚಾಮರ ಶ್ರೀನಿವಾಸ

ನಾ ನೆತ್ತಿ ಕುಣಿವೇನೂ ಶ್ರೀನಿವಾಸ

ನಿನ್ನ ರತ್ನದಾವಿಗೆ ಶ್ರೀನಿವಾಸ

ನಾ ಹೊತ್ತು ನಲಿವೇನೂ ಶ್ರೀನಿವಾಸ ..4..

ಅವರೊಳಿಗವ ಮಾಳ್ಪೆ ಶ್ರೀನಿವಾಸ

ನನ್ನ ಪಾಲಿಸೋ ಬಿಡದೆ ಶ್ರೀನಿವಾಸ

ಹೇಳಿದಂತಾಗಲಿ ಶ್ರೀನಿವಾಸ

ನಿನ್ನಗಳಾಗಿವೆ ಶ್ರೀನಿವಾಸ ..5..

ನಿನ್ನ ನಾಮ ಹೋಳಿಗೆ ಶ್ರೀನಿವಾಸ

ಕಳ್ಳ ಕುನ್ನಿ ನಾನಾಗಿಹೆ ಶ್ರೀನಿವಾಸ

ಕಟ್ಟಿ ನಿನ್ನವರೋದ್ದರೆ ಶ್ರೀನಿವಾಸ

ನನಗಿನ್ನೂ ಲಜ್ಜೆತಕೆ ಶ್ರೀನಿವಾಸ ..6..

ಬೀಸಿ ಕೊಲ್ಲಲವರೆ ಶ್ರೀನಿವಾಸ

ಮುದ್ರೆ ಕಾಸಿ ಚುಚ್ಚುಲವರೆ ಶ್ರೀನಿವಾಸ

ಮಿಕ್ಕ ಘಾಸಿಗಂಜಿನಯ್ಯ ಶ್ರೀನಿವಾಸ

ಎಂಜಲ ಬಂಟ ನಾ ಶ್ರೀನಿವಾಸ ..7..

ಹೇಸಿ ನಾನಾದರೆ ಶ್ರೀನಿವಾಸ

ಹರಿದಾಸರೂಳು ಪೊಕ್ಕೆ ಶ್ರೀನಿವಾಸ

ಅವರ ಭಾಷೆಯ ಕೇಳಿಹೆ ಶ್ರೀನಿವಾಸ

ಆ ವಾಸಿಯ ಸೈರಿಸೂ ಶ್ರೀನಿವಾಸ ..8..

ತಿಂಗಳವನಲ್ಲ ಶ್ರೀನಿವಾಸ

ವತ್ಸರಂಗಳವನಲ್ಲ ಶ್ರೀನಿವಾಸ

ರಾಜಂಗಳ ಸವದಿಪೆ ಶ್ರೀನಿವಾಸ

ಭವಂಗಳ ದಾಟುವೆ ಶ್ರೀನಿವಾಸ ..9..

ನಿನ್ನವ ನಿನ್ನವ ಶ್ರೀನಿವಾಸ

ನಾನನ್ಯರರಿವೇನೂ ಶ್ರೀನಿವಾಸ

ಅಯ್ಯ ಮನ್ನಿಸೂ ತಾಯಿತಂದೆ ಶ್ರೀನಿವಾಸ

ಪ್ರಸನ್ನ ವೆಂಕಟಾದ್ರಿ ಶ್ರೀನಿವಾಸ ..10..

**ಗುರು ಜಗನ್ನಾಥ ದಾಸರ**

**.. ಶ್ರೀ ವೇಂಕಟೇಶ ಸ್ತವರಾಜ ..**

ಶ್ರೀರಮಣ ಸರ್ವೇಶ ಸರ್ವದ . ಸಾರಭೋಕ್ತ ಸ್ವತಂತ್ರ ಸರ್ವದ .

ಪಾರ ಮಹಿಮೋದಾರ ಸದ್ಗುಣ ಪೂರ್ಣ ಗಂಭೀರ ..

ಸಾರಿದವರಘ ದೂರಗೈಸಿ . ಸೂರಿಜನರಿಗೆ ಸೌಖ್ಯ ನೀಡುವ .

ಧೀರ ವೇಂಕಟರಮಣ ಕರುಣದಿ ಪೊರೆಯೊ ನೀ ಎನ್ನ .. 1 ..

ಘನ್ನಮಹಿಮಾ ಪನ್ನಪಾಲಕ . ನಿನ್ನಹೊರತಿನ್ನನ್ಯದೇವರ .

ಮನ್ನದಲಿ ನಾ ನೆನೆಸೆನೆಂದಿಗು ಬನ್ನ ಬಡಿಸದಿರು .

ಎನ್ನಪಾಲಕ ನೀನೇ ಇರುತಿರೆ ಇನ್ನು ಭವ ಭಯವೇಕೆ ಎನಗೆ .

ಚೆನ್ನ ವೇಂಕಟರಮಣ ಕರುಣದಿ ಪೊರೆಯೊ ನೀ ಎನ್ನ .. 2 ..

ಲಕುಮಿ ಬೊಮ್ಮ ಭವಾಮರೇಶರು . ಭಕುತಿ ಪೂರ್ವಕ ನಿನ್ನ ಭಜಿಸಿ

ಸಕಲ ಲೋಕಕೆ ನಾಥರೆನಿಪರು ಸರ್ವ ಕಾಲದಲಿ..

ನಿಖಿಳ ಜೀವರ ಪೋರೆವ ದೇವನೆ . ಭಕುತಿ ನೀಯೆನಗೀಯದಿರಲು

ವ್ಯಕುತವಾಗ್ಯಪಕೀರ್ತಿ ಬಪ್ಪದೊ ಶ್ರೀನಿಕೇತನನೆ .. 3 ..

ಯಾಕೆ ಪುಟ್ಟದು ಕರುಣ ಎನ್ನೊಳು . ಸಾಕಲಾರೆಯ ನಿನ್ನ ಶರಣನ.

ನೂಕಿಬಿಟ್ಟರೆ ನಿನಗೆ ಲೋಕದಿ ಖ್ಯಾತಿ ಬಪ್ಪುವುದೇ ..

ನೋಕನೀಯನೆ ನೀನೇ ಎನ್ನನು . ಜೋಕೆಯಿಂದಲಿ ಕಾಯೋ ಬಿಡದೆ .

ಏಕದೇವನು ನೀನೇ ವೇಂಕಟ ಶೇಷಗಿರಿವಾಸ .. 4 ..

ಅಂಬುಜಾಂಬಕ ನಿನ್ನ ಪದಯುಗ . ನಂಬಿಕೊಂಡ ಈ ಪರಿಯಲಿರುತಿರೆ .

ಡೊಂಬೆಗಾರನ ತೆರದಿ ನೀ ನಿರ್ಭಾಗ್ಯ ಸ್ತಿತಿ ತೋರೆ ..

ಬಿಂಬ ಮೂರುತಿ ನಿನ್ನ ಕರಗತ .ಕಂಬುವರವೇ ಗತಿಯೋ ವಿಶ್ವಕುಟುಂಬಿ .

ಎನ್ನನು ಸಲಹೋ ಸಂತತ ಶೇಷಗಿರಿವಾಸ .. 5 ..

ಸಾರಸಿರಿ ವೈಕುಂಠ ತ್ಯಜಿಸಿ . ಧಾರುನಿಯೊಳ್ಗೊ ಲ್ಲನಾಗಿ

ಚೋರ ಕರ್ಮವ ಮಾಡಿ ಬದುಕಿಹ ದಾರಿಗರಿಕಿಲ್ಲ ..

ಸಾರಿ ಪೇಳುವೆ ನಿನ್ನ ಗುಣಗಳ . ಪಾರವಾಗಿರುತಿಹವೊ ಜನರಿಗೆ

ಧೀರ ವೆಂಕಟ ರಮಣ ಕರುಣದಿ ಪೊರೆಯೊ ನೀ ಯೆನ್ನ ..6 ..

ನೀರ ಮುಳುಗಿ ಭಾರ ಪೊತ್ತು . ಧಾರುಣೀ ತಳವಗೆದು ಸಿಟ್ಟಿಲಿ .

ಕ್ರೂರನುದರವ ಸೀಳಿ ಕರುಳಿನ ಮಾಲೆ ಧರಿಸಿದರು ..

ಪೋರ ವಿಪ್ರ ಕುಠಾರಿ ವನವನ . ಚಾರಿ ಗೋಪ ದಿಗಂಬರಾಶ್ವವ ಏರಿ

ಪೋದರು ಬಿಡೆನೋ ವೇಂಕಟ ಶೇಷಗಿರಿವಾಸ ..7..

ಲಕ್ಷ್ಮೀನಾಯಕ ಸಾರ್ವಭೌಮನೆ . ಪಕ್ಷಿವಾಹನ ಪರಮ ಪುರುಷನೆ .

ಮೊಕ್ಷದಾಯಕ ಪ್ರಾಣಜನಕನೆ ವಿಶ್ವ ವ್ಯಾಪಕನೆ ..

ಅಕ್ಷಯಾಂಬರವಿತ್ತು ವಿಜಯನ . ಪಕ್ಷಪಾತವ ಮಾಡಿ ಕುರುಗಳ

ಲಕ್ಷ್ಯಮಾಡದೆ ಕೊಂದೆಯೋ ಶ್ರೀ ಶೇಷಗಿರಿವಾಸ ..8..

ಹಿಂದೆ ನೀ ಪ್ರಹ್ಲಾದಗೋಸುಗ . ಎಂದು ನೋಡದ ರೂಪ ಧರಿಸಿ .

ಬಂದು ದೈತ್ಯನ ಒಡಲ ಬಗೆದು ಪೊರೆದೆ ಬಾಲಕನ ..

ತಂದೆತಾಯ್ಗಳ ಬಿಟ್ಟು ವಿಪಿನದಿ . ನಿಂದು ತಪಿಸುವ ಪಂಚಮತ್ಸರ .

ಕಂದನಾ ಧ್ರುವನಿಗೋಲಿದು ಪೊರೆದೆಯೊ ಶೇಷಗಿರಿವಾಸ ..9..

ಪಿಂತು ಮಾದಿದ ಮಹಿಮೆಗಳ ನಾ . ನೆಂತು ವರ್ಣಿಸಲೇನು ಫಲ

ಶ್ರೀಕಾಂತ ಎನ್ನನು ಪೊರೆಯೆ ಕೀರುತಿ ನಿನಗೆ ಫಲವೆನಗೆ ..

ಕಂತು ಜನಕನೆ ಎನ್ನ ಮನಸಿನ . ಅಂತರಂಗದಿ ನೀನೆ ಸರ್ವದ .

ನಿಂತು ಪ್ರೇರಣೆ ಮಾಳ್ಪೆ ಸರ್ವದ ಶೇಷಗಿರಿವಾಸ ..10..

ಮಡುವಿನೊಳಗಿಹ ಮಕರಿಕಾಲನು . ಪಿಡಿದು ಬಾಧಿಸೆ ಕರಿಯು ತ್ರಿಜಗ.

ದ್ವಡೆಯ ಪಾಲಿಸೊ ಎನಲು ತಕ್ಷಣ ಬಂದು ಪಾಲಿಸಿದೆ ..

ಮಡದಿ ಮಾತನು ಕೇಳಿ ಬಲುಪರಿ . ಬಡವ ಬ್ರಾಹ್ಮಣ ಧಾನ್ಯ ಕೊಡಲು .

ಪೊಡವಿಗಸದಳಭಾಗ್ಯ ನೀಡಿದೆ ಶೇಷಗಿರಿವಾಸ ..11..

ಶ್ರೀನಿವಾಸನೆ ಭಕ್ತಪೋಷನೆ . ಜ್ಞಾನಿ ಕುಲಗಳಿಗಭಯದಾಯಕ .

ಧೀನಬಾಂದವ ನೀನೇ ಎನ್ನಮನದರ್ಥ ಪೂರೈಸೋ ..

ಅನುಪಮೋಪಮಜ್ಞಾನ ಸಂಪದ. ವಿನಯ ಪೂರ್ವಕವಿತ್ತು ಪಾಲಿಸೊ .

ಜನುಮ ಜನುಮಕೆಮರೆಯ ಬೇಡವೋ ಶೇಷಗಿರಿವಾಸ .. 12 ..

ಮದವು ಮತ್ಸರ ಲೋಭ ಮೋಹವು . ಒದಗಬಾರದು ಎನ್ನ ಮನದಲಿ .

ಪದುಮನಾಭನೆ ಜ್ಞಾನ ಭಕ್ತಿವಿರಕ್ತಿ ನೀನಿತ್ತು .

ಹೃದಯ ಮಧ್ಯದಿ ನಿನ್ನ ರೂಪವು . ವದನದಲಿ ತವ ನಾಮಮಂತ್ರವು .

ಸದಯ ಪಾಲಿಸು ಬೇಡಿಕೊಂಬೇನೊ ಶೇಷಗಿರಿವಾಸ .. 13 ..

ಅಂದನುಡಿ ಪುಸಿಯಾಗಬಾರದು . ಬಂದ ಭಾಗ್ಯವು ಪೋಗಬಾರದು .

ಕುಂದುಬಾರದೆ ನಿನ್ನ ಕರುಣವು ದಿನದಿ ವರ್ಧಿಸಲಿ .

ನಿಂದೆ ಮಾಡುವ ಜನರ ಸಂಗವು . ಎಂದಿಗಾದರು ದೊರೆಯಬಾರದು .

ಎಂದು ನಿನ್ನನು ಬೇಡಿಕೊಂಬೆನೊ ಶೇಷಗಿರಿವಾಸ .. 14 ..

ಏನು ಬೇಡಲಿ ಎನ್ನ ದೇವನೇ . ಸಾನುರಾಗದಿ ಎನ್ನ ಪಾಲಿಸೊ.

ನಾನಾ ವಿಧವಿಧ ಸೌಖ್ಯ ನಿಡುವುದಿಹ ಪರಂಗಳಲಿ .

ಶ್ರೀನಿವಾಸನೆ ನಿನ್ನ ದಾಸಗೆ . ಏನು ಕೊರೆತಿಲೆಲ್ಲಿ ನೋಡಲು .

ನೀನೇ ನಿಂತೀವಿದದಿ ಪೇಳಿಸು ಶೇಷಗಿರಿವಾಸ ..15 ..

ಆರು ಮುನಿದವರೇನು ಮಾಳ್ಪರೊ . ಆರು ಒಲಿದವರೇನು ಮಾಳ್ಪರೊ .

ಆರುನೇಹಿಗರಾರು ದ್ವೇಶಿಗಳಾರುದಾಶಿನರು ..

ಕ್ರೂರ ಜೀವರ ಹಣಿದು ಸಾತ್ವಿಕ . ಧೀರ ಜೀವರ ಪೊರೆದು ನಿನ್ನಲಿ .

ಸಾರ ಭಕುತಿಯನಿತ್ತು ಪಾಲಿಸೋ ಶೇಷಗಿರಿವಾಸ .. 16 ..

ನಿನ್ನ ಸೇವೆಯನಿತ್ತು ಎನಗೆ . ನಿನ್ನ ಪದಯುಗಭಕ್ತಿ ನೀಡಿ .

ನಿನ್ನ ಗುಣಗಣ ಸ್ತವನ ಮಾಡುವ ಜ್ಞಾನ ನೀನಿತ್ತು .

ಎನ್ನ ಮನದಲಿ ನೀನೇ ನಿಂತು . ಘನ್ನಕಾರ್ಯವ ಮಾಡಿ ಮಾಡಿಸು .

ಧನ್ಯನೆಂದೆನಿಸೆನ್ನ ಲೋಕದಿ ಶೇಷಗಿರಿವಾಸ .. 17 ..

ಜಯ ಜಯತು ಶಠ ಕೂರ್ಮರೂಪನೆ . ಜಯ ಜಯತು ಕಿಟ ಸಿಂಹ ವಾಮನ .

ಜಯ ಜಯತು ಭೃಗುರಾಮ ರಘುಕುಲಸೋಮ ಶ್ರೀರಾಮ ..

ಜಯ ಜಯತು ಸಿರಿ ಯದುವರೇಣ್ಯನೆ . ಜಯ ಜಯತು ಜನಮೋಹ ಬುದ್ಧನೆ .

ಜಯ ಜಯತು ಕಲಿಕಲ್ಮಶಘ್ನನೆ ಕಲ್ಕಿನಾಮಕನೆ .. 18 ..

ಕರುಣಸಾಗರ ನೀನೇ ನಿಜಪದ . ಶರಣವತ್ಸಲ ನೀನೇ ಶಾಶ್ವತ .

ಶರಣ ಜನಮಂದಾರ ಕಮಲಾ ಕಾಂತ ಜಯವಂತ .

ನಿರುತ ನಿನ್ನನು ನುತಿಸಿ ಪಾಡುವೆ . ವರದ ಗುರು ಜಗನ್ನಾಥವಿಠ್ಠಲ .

ಪರಮ ಪ್ರೇಮದಿ ಪೊರೆಯೊ ಎನ್ನನು ಶೇಷಗಿರಿವಾಸ .. 19 ..

**ಅಥ ದ್ವಾದಶಸ್ತೋತ್ರೇಷು ತೃತೀಯಸ್ತೋತ್ರಂ**

ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ ಹರಿಪಾದವಿನಮ್ರಧಿಯಾ ಸತತಂ .
ಹರಿರೇವ ಪರೋ ಹರಿರೇವ ಗುರುಃ ಹರಿರೇವ ಜಗತ್ಪಿತೃಮಾತೃಗತಿಃ .. 1..

ನ ತತೋಽಸ್ತ್ಯಪರಂ ಜಗದೀಡ್ಯತಮಂ (ಜಗತೀಡ್ಯತಮಂ) ಪರಮಾತ್ಪರತಃ ಪುರುಷೋತ್ತಮತಃ .
ತದಲಂ ಬಹುಲೋಕವಿಚಿಂತನಯಾ ಪ್ರವಣಂ ಕುರು ಮಾನಸಮೀಶಪದೇ .. 2..

ಯತತೋಽಪಿ ಹರೇಃ ಪದಸಂಸ್ಮರಣೇ ಸಕಲಂ ಹ್ಯಘಮಾಶು ಲಯಂ ವ್ರಜತಿ .
ಸ್ಮರತಸ್ತು ವಿಮುಕ್ತಿಪದಂ ಪರಮಂ ಸ್ಫುಟಮೇಷ್ಯತಿ ತತ್ಕಿಮಪಾಕ್ರಿಯತೇ .. 3..

ಶೃಣುತಾಮಲಸತ್ಯವಚಃ ಪರಮಂ ಶಪಥೇರಿತಂ ಉಚ್ಛ್ರಿತಬಾಹುಯುಗಂ .
ನ ಹರೇಃ ಪರಮೋ ನ ಹರೇಃ ಸದೃಶಃ ಪರಮಃ ಸ ತು ಸರ್ವ ಚಿದಾತ್ಮಗಣಾತ್ .. 4..

ಯದಿ ನಾಮ ಪರೋ ನ ಭವೇತ (ಭವೇತ್ಸ) ಹರಿಃ ಕಥಮಸ್ಯ ವಶೇ ಜಗದೇತದಭೂತ್ .
ಯದಿ ನಾಮ ನ ತಸ್ಯ ವಶೇ ಸಕಲಂ ಕಥಮೇವ ತು ನಿತ್ಯಸುಖಂ ನ ಭವೇತ್ .. 5..

ನ ಚ ಕರ್ಮವಿಮಾಮಲ ಕಾಲಗುಣಪ್ರಭೃತೀಶಮಚಿತ್ತನು ತದ್ಧಿ ಯತಃ .
ಚಿದಚಿತ್ತನು ಸರ್ವಮಸೌ ತು ಹರಿರ್ಯಮಯೇದಿತಿ ವೈದಿಕಮಸ್ತಿ ವಚಃ .. 6..

ವ್ಯವಹಾರಭಿದಾಽಪಿ ಗುರೋರ್ಜಗತಾಂ ನ ತು ಚಿತ್ತಗತಾ ಸ ಹಿ ಚೋದ್ಯಪರಂ .
ಬಹವಃ ಪುರುಷಾಃ ಪುರುಷಪ್ರವರೋ ಹರಿರಿತ್ಯವದತ್ಸ್ವಯಮೇವ ಹರಿಃ .. 7..

ಚತುರಾನನ ಪೂರ್ವವಿಮುಕ್ತಗಣಾ ಹರಿಮೇತ್ಯ ತು ಪೂರ್ವವದೇವ ಸದಾ .
ನಿಯತೋಚ್ಚವಿನೀಚತಯೈವ ನಿಜಾಂ ಸ್ಥಿತಿಮಾಪುರಿತಿ ಸ್ಮ ಪರಂ ವಚನಂ .. 8..

ಆನಂದತೀರ್ಥಸನ್ನಾಮ್ನಾ ಪೂರ್ಣಪ್ರಜ್ಞಾಭಿಧಾಯುಜಾ .
ಕೃತಂ ಹರ್ಯಷ್ಟಕಂ ಭಕ್ತ್ಯಾ ಪಠತಃ ಪ್ರೀಯತೇ ಹರಿಃ .. 9..

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತಂ
ದ್ವಾದಶಸ್ತೋತ್ರೇಷು ತೃತೀಯಸ್ತೋತ್ರಂ ಸಂಪೂರ್ಣಂ

**ಅಥ ದ್ವಾದಶಸ್ತೋತ್ರೇಷು ಅಷ್ಟಮಸ್ತೋತ್ರಂ**

ವಂದಿತಾಶೇಷವಂದ್ಯೋರುವೃಂದಾರಕಂ ಚಂದನಾಚರ್ಚಿತೋದಾರಪೀನಾಂಸಕಂ .
ಇಂದಿರಾಚಂಚಲಾಪಾಂಗನೀರಾಜಿತಂ ಮಂದರೋದ್ಧಾರಿವೃತ್ತೋದ್ಭುಜಾಭೋಗಿನಂ .
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ಪ್ರೀಣಯಾಮೋ ವಾಸುದೇವಂ .. 1..

ಸೃಷ್ಟಿಸಂಹಾರಲೀಲಾವಿಲಾಸಾತತಂ ಪುಷ್ಟಷಾಡ್ಗುಣ್ಯಸದ್ವಿಗ್ರಹೋಲ್ಲಾಸಿನಂ .
ದುಷ್ಟನಿಃಶೇಷಸಂಹಾರಕರ್ಮೋದ್ಯತಂ ಹೃಷ್ಟಪುಷ್ಟಾತಿಶಿಷ್ಟ (ಅನುಶಿಷ್ಟ) ಪ್ರಜಾಸಂಶ್ರಯಂ .
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ಪ್ರೀಣಯಾಮೋ ವಾಸುದೇವಂ .. 2..

ಉನ್ನತಪ್ರಾರ್ಥಿತಾಶೇಷಸಂಸಾಧಕಂ ಸನ್ನತಾಲೌಕಿಕಾನಂದದಶ್ರೀಪದಂ .
ಭಿನ್ನಕರ್ಮಾಶಯಪ್ರಾಣಿಸಂಪ್ರೇರಕಂ ತನ್ನ ಕಿಂ ನೇತಿ ವಿದ್ವತ್ಸು ಮೀಮಾಂಸಿತಂ .
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ಪ್ರೀಣಯಾಮೋ ವಾಸುದೇವಂ .. 3..

ವಿಪ್ರಮುಖ್ಯೈಃ ಸದಾ ವೇದವಾದೋನ್ಮುಖೈಃ ಸುಪ್ರತಾಪೈಃ ಕ್ಷಿತೀಶೇಶ್ವರೈಶ್ಚಾರ್ಚಿತಂ .
ಅಪ್ರತರ್ಕ್ಯೋರುಸಂವಿದ್ಗುಣಂ ನಿರ್ಮಲಂ ಸಪ್ರಕಾಶಾಜರಾನಂದರೂಪಂ ಪರಂ .
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ಪ್ರೀಣಯಾಮೋ ವಾಸುದೇವಂ .. 4..

ಅತ್ಯಯೋ ಯಸ್ಯ (ಯೇನ) ಕೇನಾಪಿ ನ ಕ್ವಾಪಿ ಹಿ ಪ್ರತ್ಯಯೋ ಯದ್ಗುಣೇಷೂತ್ತಮಾನಾಂ ಪರಃ .
ಸತ್ಯಸಂಕಲ್ಪ ಏಕೋ ವರೇಣ್ಯೋ ವಶೀ ಮತ್ಯನೂನೈಃ ಸದಾ ವೇದವಾದೋದಿತಃ .
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ಪ್ರೀಣಯಾಮೋ ವಾಸುದೇವಂ .. 5..

ಪಶ್ಯತಾಂ ದುಃಖಸಂತಾನನಿರ್ಮೂಲನಂ ದೃಶ್ಯತಾಂ ದೃಶ್ಯತಾಮಿತ್ಯಜೇಶಾರ್ಚಿತಂ .
ನಶ್ಯತಾಂ ದೂರಗಂ ಸರ್ವದಾಪ್ಯಾತ್ಮಗಂ ವಶ್ಯತಾಂ ಸ್ವೇಚ್ಛಯಾ ಸಜ್ಜನೇಷ್ವಾಗತಂ .
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ಪ್ರೀಣಯಾಮೋ ವಾಸುದೇವಂ .. 6..

ಅಗ್ರಜಂ ಯಃ ಸಸರ್ಜಾಜಮಗ್ರ್ಯಾಕೃತಿಂ ವಿಗ್ರಹೋ ಯಸ್ಯ ಸರ್ವೇ ಗುಣಾ ಏವ ಹಿ .
ಉಗ್ರ ಆದ್ಯೋऽಪಿ ಯಸ್ಯಾತ್ಮಜಾಗ್ರ್ಯಾತ್ಮಜಃ ಸದ್ಗೃಹೀತಃ ಸದಾ ಯಃ ಪರಂ ದೈವತಂ .
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ಪ್ರೀಣಯಾಮೋ ವಾಸುದೇವಂ .. 7..

ಅಚ್ಯುತೋ ಯೋ ಗುಣೈರ್ನಿತ್ಯಮೇವಾಖಿಲೈಃ ಪ್ರಚ್ಯುತೋऽಶೇಷದೋಷೈಃ ಸದಾ ಪೂರ್ತಿತಃ .
ಉಚ್ಯತೇ ಸರ್ವವೇದೋರುವಾದೈರಜಃ ಸ್ವರ್ಚಿತೋ ಬ್ರಹ್ಮರುದ್ರೇಂದ್ರಪೂರ್ವೈಃ ಸದಾ .
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ಪ್ರೀಣಯಾಮೋ ವಾಸುದೇವಂ .. 8..

ಧಾರ್ಯತೇ ಯೇನ ವಿಶ್ವಂ ಸದಾಜಾದಿಕಂ ವಾರ್ಯತೇऽಶೇಷದುಃಖಂ ನಿಜಧ್ಯಾಯಿನಾಂ .
ಪಾರ್ಯತೇ ಸರ್ವಮನ್ಯೈರ್ನಯತ್ಪಾರ್ಯತೇ ಕಾರ್ಯತೇ ಚಾಖಿಲಂ ಸರ್ವಭೂತೈಃ ಸದಾ .
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ಪ್ರೀಣಯಾಮೋ ವಾಸುದೇವಂ .. 9..

ಸರ್ವಪಾಪಾನಿಯತ್ಸಂಸ್ಮೃತೇಃ ಸಂಕ್ಷಯಂ ಸರ್ವದಾ ಯಾಂತಿ ಭಕ್ತ್ಯಾ ವಿಶುದ್ಧಾತ್ಮನಾಂ .
ಶರ್ವಗುರ್ವಾದಿಗೀರ್ವಾಣ ಸಂಸ್ಥಾನದಃ ಕುರ್ವತೇ ಕರ್ಮ ಯತ್ಪ್ರೀತಯೇ ಸಜ್ಜನಾಃ .
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ಪ್ರೀಣಯಾಮೋ ವಾಸುದೇವಂ .. 10..

ಅಕ್ಷಯಂ ಕರ್ಮ ಯಸ್ಮಿನ್ ಪರೇ ಸ್ವರ್ಪಿತಂ ಪ್ರಕ್ಷಯಂ ಯಾಂತಿ ದುಃಖಾನಿ ಯನ್ನಾಮತಃ .
ಅಕ್ಷರೋ ಯೋಽಜರಃ ಸರ್ವದೈವಾಮೃತಃ ಕುಕ್ಷಿಗಂ ಯಸ್ಯ ವಿಶ್ವಂ ಸದಾಽಜಾದಿಕಂ .
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ಪ್ರೀಣಯಾಮೋ ವಾಸುದೇವಂ .. 11..

ನಂದಿತೀರ್ಥೋರುಸನ್ನಾಮಿನೋ ನಂದಿನಃ ಸಂದಧಾನಾಃ ಸದಾನಂದದೇವೇ ಮತಿಂ .
ಮಂದಹಾಸಾರುಣಾ ಪಾಂಗದತ್ತೋನ್ನತಿಂ ವಂದಿತಾಶೇಷದೇವಾದಿವೃಂದಂ ಸದಾ .
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಂ ಪ್ರೀಣಯಾಮೋ ವಾಸುದೇವಂ .. 12..

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತಂ
ದ್ವಾದಶಸ್ತೋತ್ರೇಷು ಅಷ್ಟಮಸ್ತೋತ್ರಂ ಸಂಪೂರ್ಣಂ

**ಶ್ರೀನಿವಾಸಾ ಗೋವಿಂದ**

ಶ್ರೀನಿವಾಸಾ ಗೋವಿಂದ . ಶ್ರೀ ವೇಂಕಟೇಶಾ ಗೋವಿಂದ .

ಭಕ್ತ ವತ್ಸಲ ಗೋವಿಂದ . ಭಾಗವತಾ ಪ್ರಿಯ ಗೋವಿಂದ .

ನಿತ್ಯ ನಿರ್ಮಲ ಗೋವಿಂದ . ನೀಲಮೇಘ ಶ್ಯಾಮ ಗೋವಿಂದ .

ಗೋವಿಂದ ಹರಿ ಗೋವಿಂದ . ಗೋಕುಲ ನಂದನ ಗೋವಿಂದ .

ಪುರಾಣ ಪುರುಷಾ ಗೋವಿಂದ . ಪುಂಡರೀಕಾಕ್ಷ ಗೋವಿಂದ .

ನಂದ ನಂದನಾ ಗೋವಿಂದ . ನವನೀತ ಚೋರಾ ಗೋವಿಂದ .

ಪಶುಪಾಲಕ ಶ್ರೀ ಗೋವಿಂದ . ಪಾಪ ವಿಮೋಚನ ಗೋವಿಂದ .

ದುಷ್ಟ ಸಂಹಾರ ಗೋವಿಂದ . ದುರಿತ ನಿವಾರಣ ಗೋವಿಂದ

ಗೋವಿಂದ ಹರಿ ಗೋವಿಂದ . ಗೋಕುಲ ನಂದನ ಗೋವಿಂದ .

ಶಿಷ್ಟ ಪರಿಪಾಲಕ ಗೋವಿಂದ . ಕಷ್ಟ ನಿವಾರಣ ಗೋವಿಂದ .

ವಜ್ರ ಮಕುಟಧರ ಗೋವಿಂದ . ವರಾಹ ಮೂರ್ತೀ ಗೋವಿಂದ .

ಗೋಪೀಜನ ಲೋಲ ಗೋವಿಂದ . ಗೋವರ್ಧನೋದ್ಧಾರ ಗೋವಿಂದ .

ದಶರಥ ನಂದನ ಗೋವಿಂದ . ದಶಮುಖ ಮರ್ಧನ ಗೋವಿಂದ .

ಗೋವಿಂದ ಹರಿ ಗೋವಿಂದ . ಗೋಕುಲ ನಂದನ ಗೋವಿಂದ .

ಪಕ್ಷಿ ವಾಹನಾ ಗೋವಿಂದ . ಪಾಂಡವ ಪ್ರಿಯ ಗೋವಿಂದ .

ಮತ್ಸ್ಯ ಕೂರ್ಮ ಗೋವಿಂದ . ಮಧು ಸೂಧನಾ ಹರಿ ಗೋವಿಂದ .

ವರಾಹ ನ್ರುಸಿಂಹ ಗೋವಿಂದ . ವಾಮನ ಭೃಗುರಾಮ ಗೋವಿಂದ .

ಬಲರಾಮಾನುಜ ಗೋವಿಂದ . ಬೌದ್ಧ ಕಲ್ಕಿಧರ ಗೋವಿಂದ .

ಗೋವಿಂದ ಹರಿ ಗೋವಿಂದ . ಗೋಕುಲ ನಂದನ ಗೋವಿಂದ .

ವೇಣು ಗಾನ ಪ್ರಿಯ ಗೋವಿಂದ . ವೇಂಕಟ ರಮಣಾ ಗೋವಿಂದ .

ಸೀತಾ ನಾಯಕ ಗೋವಿಂದ . ಶ್ರಿತಪರಿಪಾಲಕ ಗೋವಿಂದ .

ದರಿದ್ರಜನ ಪೋಷಕ ಗೋವಿಂದ . ಧರ್ಮ ಸಂಸ್ಥಾಪಕ ಗೋವಿಂದ .

ಅನಾಥ ರಕ್ಷಕ ಗೋವಿಂದ . ಆಪಧ್ಭಾಂದವ ಗೋವಿಂದ .

ಗೋವಿಂದ ಹರಿ ಗೋವಿಂದ . ಗೋಕುಲ ನಂದನ ಗೋವಿಂದ .

ಶರಣಾಗತವತ್ಸಲ ಗೋವಿಂದ . ಕರುಣಾ ಸಾಗರ ಗೋವಿಂದ .

ಕಮಲ ದಲಾಕ್ಷಾ ಗೋವಿಂದ . ಕಾಮಿತ ಫಲದಾತ ಗೋವಿಂದ .

ಪಾಪ ವಿನಾಶಕ ಗೋವಿಂದ . ಪಾಹಿ ಮುರಾರೇ ಗೋವಿಂದ .

ಶ್ರೀಮುದ್ರಾಂಕಿತ ಗೋವಿಂದ . ಶ್ರೀವತ್ಸಾಂಕಿತ ಗೋವಿಂದ .

ಗೋವಿಂದ ಹರಿ ಗೋವಿಂದ . ಗೋಕುಲ ನಂದನ ಗೋವಿಂದ .

ಧರಣೀ ನಾಯಕ ಗೋವಿಂದ . ದಿನಕರ ತೇಜಾ ಗೋವಿಂದ .

ಪದ್ಮಾವತೀ ಪ್ರಿಯ ಗೋವಿಂದ . ಪ್ರಸನ್ನ ಮೂರ್ತೇ ಗೋವಿಂದ .

ಅಭಯ ಹಸ್ತ ಗೋವಿಂದ . ಅಕ್ಷಯ ವರದಾ ಗೋವಿಂದ .

ಶಂಖ ಚಕ್ರಧರ ಗೋವಿಂದ . ಸಾರಂಗ ಗದಾಧರ ಗೋವಿಂದ .

ಗೋವಿಂದ ಹರಿ ಗೋವಿಂದ . ಗೋಕುಲ ನಂದನ ಗೋವಿಂದ .

ವಿರಾಜ ತೀರ್ಥ ಗೋವಿಂದ . ವಿರೋಧಿ ಮರ್ಧನ ಗೋವಿಂದ .

ಸಾಲಗ್ರಾಮ ಹರ ಗೋವಿಂದ . ಸಹಸ್ರ ನಾಮ ಗೋವಿಂದ .

ಲಕ್ಷ್ಮೀ ವಲ್ಲಭ ಗೋವಿಂದ . ಲಕ್ಷ್ಮಣಾಗ್ರಜ ಗೋವಿಂದ .

ಕಸ್ತೂರಿ ತಿಲಕ ಗೋವಿಂದ . ಕಾಂಚನಾಂಬರಧರ ಗೋವಿಂದ .

ಗೋವಿಂದ ಹರಿ ಗೋವಿಂದ . ಗೋಕುಲ ನಂದನ ಗೋವಿಂದ .

ಗರುಡ ವಾಹನಾ ಗೋವಿಂದ . ಗಜರಾಜ ರಕ್ಷಕ ಗೋವಿಂದ .

ವಾನರ ಸೇವಿತ ಗೋವಿಂದ . ವಾರಧಿ ಬಂಧನ ಗೋವಿಂದ .

ಏಡು ಕೋಂಡಲ ವಾಡಾ ಗೋವಿಂದ . ಏಕತ್ವ ರೂಪಾ ಗೋವಿಂದ .

ರಾಮ ಕ್ರಿಷ್ಣಾ ಗೋವಿಂದ . ರಘುಕುಲ ನಂದನ ಗೋವಿಂದ .

ಗೋವಿಂದ ಹರಿ ಗೋವಿಂದ . ಗೋಕುಲ ನಂದನ ಗೋವಿಂದ .

ಪ್ರತ್ಯಕ್ಷ ದೇವ ಗೋವಿಂದ . ಪರಮ ದಯಾಕರ ಗೋವಿಂದ .

ವಜ್ರ ಮಕುಟದರ ಗೋವಿಂದ . ವೈಜಯಂತಿ ಮಾಲ ಗೋವಿಂದ .

ವಡ್ಡೀ ಕಾಸುಲ ವಾಡಾ ಗೋವಿಂದ . ವಾಸುದೇವ ತನಯಾ ಗೋವಿಂದ .

ಬಿಲ್ವಪತ್ರಾರ್ಚಿತ ಗೋವಿಂದ . ಭಿಕ್ಷುಕ ಸಂಸ್ತುತ ಗೋವಿಂದ .

ಗೋವಿಂದ ಹರಿ ಗೋವಿಂದ . ಗೋಕುಲ ನಂದನ ಗೋವಿಂದ .

ಸ್ತ್ರೀ ಪುಂ ರೂಪಾ ಗೋವಿಂದ . ಶಿವಕೇಶವ ಮೂರ್ತಿ ಗೋವಿಂದ .

ಬ್ರಹ್ಮಾನಂದ ರೂಪಾ ಗೋವಿಂದ . ಭಕ್ತ ತಾರಕಾ ಗೋವಿಂದ .

ನಿತ್ಯ ಕಲ್ಯಾಣ ಗೋವಿಂದ . ನೀರಜ ನಾಭಾ ಗೋವಿಂದ .

ಹತಿ ರಾಮ ಪ್ರಿಯ ಗೋವಿಂದ . ಹರಿ ಸರ್ವೋತ್ತಮ ಗೋವಿಂದ .

ಗೋವಿಂದ ಹರಿ ಗೋವಿಂದ . ಗೋಕುಲ ನಂದನ ಗೋವಿಂದ .

ಜನಾರ್ಧನ ಮೂರ್ತಿ ಗೋವಿಂದ . ಜಗತ್ ಸಾಕ್ಷಿ ರೂಪಾ ಗೋವಿಂದ .

ಅಭಿಷೇಕ ಪ್ರಿಯ ಗೋವಿಂದ . ಅಭನ್ನಿರಾಸಾದ ಗೋವಿಂದ .

ನಿತ್ಯ ಶುಭಾತ ಗೋವಿಂದ . ನಿಖಿಲ ಲೋಕೇಶಾ ಗೋವಿಂದ .

ಗೋವಿಂದ ಹರಿ ಗೋವಿಂದ . ಗೋಕುಲ ನಂದನ ಗೋವಿಂದ .

ಆನಂದ ರೂಪಾ ಗೋವಿಂದ . ಆದ್ಯಂತ ರಹಿತ ಗೋವಿಂದ .

ಇಹಪರ ದಾಯಕ ಗೋವಿಂದ . ಇಪರಾಜ ರಕ್ಷಕ ಗೋವಿಂದ .

ಪದ್ಮ ದಲಕ್ಷ ಗೋವಿಂದ . ಪದ್ಮನಾಭಾ ಗೋವಿಂದ .

ಗೋವಿಂದ ಹರಿ ಗೋವಿಂದ . ಗೋಕುಲ ನಂದನ ಗೋವಿಂದ .

ತಿರುಮಲ ನಿವಾಸಾ ಗೋವಿಂದ . ತುಲಸೀ ವನಮಾಲ ಗೋವಿಂದ .

ಶೇಷ ಸಾಯಿ ಗೋವಿಂದ . ಶೇಷಾದ್ರಿ ನಿಲಯ ಗೋವಿಂದ .

ಶ್ರೀ ಶ್ರೀನಿವಾಸಾ ಗೋವಿಂದ . ಶ್ರೀ ವೇಂಕಟೇಶಾ ಗೋವಿಂದ .

ಗೋವಿಂದ ಹರಿ ಗೋವಿಂದ . ಗೋಕುಲ ನಂದನ ಗೋವಿಂದ ..

**ದಾಸನಾಗು ವಿಶೇಷನಾಗು**

ಏಸು ಕಾಯಂಗಳ ಕಳೆದು ಎಂಬತ್ನಾಲ್ಕು ಲಕ್ಷ ಜೀವರಾಶಿಯನ್ನು ದಾಟಿ ಬಂದ ಈ ಶರೀರ |

ತಾನಲ್ಲ ತನ್ನದಲ್ಲ ಆಸೆ ಥರವಲ್ಲ ಮುಂದೆ ಬಾಹೋದಲ್ಲ

ದಾಸನಾಗು ವಿಶೇಷನಾಗು ದಾಸನಾಗು ವಿಶೇಷನಾಗು||ಪ||

ಆಶ ಕ್ಲೇಶ ದೋಷವೆಂಬ ಅಬ್ಧಿಯೊಳು ಮುಳುಗಿ ಯಮನ ಪಾಶಕ್ಕೊಳಗಾಗದೆ ನಿರ್ದೋಷಿಯಾಗು ಸಂತೋಷಿಯಾಗು

ಕಾಶಿ ವಾರಣಾಸಿ ಕಂಚಿ ಕಾಳಹಸ್ತಿ ರಾಮೇಶ್ವರ ಏಸು ದೇಶ ತಿರುಗಿದರೆ ಬಾಹೋದೇನೋ ಅಲ್ಲಿ ಹೋದೇನೋ

ದೋಷ ನಾಶ ಕೃಷ್ಣವೇಣಿ ಗಂಗೆ ಗೋದಾವರಿ ಭವ ನಾಶಿತುಂಗಭದ್ರೆ ಯಮುನೆ ವಾಸದಲ್ಲಿ ಉಪವಾಸದಲ್ಲಿ |

ಮೀಸಲಾಗಿ ಮಿಂದು ಜಪ ತಪ ಹೋಮ ನೇಮಗಳ ಏಸು ಬಾರಿ ಮಾಡಿದರು ಫಲವೇನು ಈ ಛಲವೇನು || 1 ||

ಅಂದಿಗೋ ಇಂದಿಗೋ ಒಮ್ಮೆ ಸಿರಿಕಮಲೇಶನನ್ನು ಒಂದು ಬಾರಿ ಯಾರೂ ಹಿಂದ ನೆನೆಯಲಿಲ್ಲ ಮನದಣಿಯಲಿಲ್ಲ |

ಬಂದು ಬಂದು ಭ್ರಮೆಗೊಂಡು ಮಾಯಾಮೋಹಕ್ಕೆ ಸಿಕ್ಕಿ | ನೊಂದು ಬೆಂದು ಒಂದರಿಂದ ಉಳಿಯಲಿಲ್ಲ ಬಂಧ ಕಳೆಯಲಿಲ್ಲ | ಸಂದೇಹವ ಮಾಡದಿರು ಅರಿವು ಎಂಬ ದೀಪವಿಟ್ಟು ಇಂದು ಕಂಡ್ಯ ದೇಹದಲ್ಲಿ ಪಿಂಡಾಂಡ ಹಾಗೆ ಬ್ರಹ್ಮಾಂಡ |

ಇಂದು ಹರಿಯ ಧ್ಯಾನವನ್ನು ಮಾಡಿ ವಿವೇಕದಿ | ಮುಕುಂದನಿಂದ ಮುಕ್ತಿ ಬೇಡು ಕಂಡ್ಯ ನೀ ನೋಡು ಕಂಡ್ಯ || 2 ||

ನೂರು ಬಾರಿ ಶರಣು ಮಾಡಿ ನೀರ ಮುಳುಗಲ್ಯಾಕೆ ಪರ ನಾರಿಯರ ನೋಟಕೆ ಗುರಿಯ ಮಾಡಿದಿ ಮನ ಸೆರೆಯ ಮಾಡಿದಿ | ಸೂರೆಯೊಳು ಸೂರೆ ತುಂಬಿ ಮೇಲೆ ಹೂವಿನ ಹಾರ ಗೀರು ಗಂಧ ಅಕ್ಷತೆಯ ಧರಿಸಿದಂತೆ ನೀ ಮೆರೆಸಿದಂತೆ |

ಗಾರುಢಿಯ ಮಾತ ಬಿಟ್ಟು ನಾದಬ್ರಹ್ಮನ ಪಿಡಿದು ಸಾರಿ ಸೂರಿ ಮುಕ್ತಿಯನ್ನು ಶಮನದಿಂದ ಮತ್ತೆ ಸುಮನದಿಂದ |

ನಾರಾಯಣ ಅಚ್ಯುತ ಅನಂತಾದಿ ಕೇಶವನ | ಸಾರಾಮೃತವನ್ನುಂಡು ಸುಖಿಸೋ ಲಂಡ ಜೀವವೇ ಎಲೇ ಭಂಡ ಜೀವವೇ || 3 ||

**ಪವಮಾನ ಪವಮಾನ**

ಪವಮಾನ ಪವಮಾನ ಜಗದ ಪ್ರಾಣ ಸಂಕರುಷಣ ಭವಭಯಾರಣ್ಯ ದಹನ |ಪ|

ಶ್ರವಣವೆ ಮೊದಲಾದ ನವವಿಧ ಭಕುತಿಯ ತವಕದಿಂದಲಿ ಕೊಡು ಕವಿಗಳ ಪ್ರಿಯ |ಅ.ಪ|

ಹೇಮ ಕಚ್ಚುಟ ಉಪವೀತ ಧರಿಪ ಮಾರುತ ಕಾಮಾದಿ ವರ್ಗ ರಹಿತ

ವ್ಯೋಮಾದಿ ಸರ್ವವ್ಯಾಪುತ ಸತತ ನಿರ್ಭೀತ ರಾಮಚಂದ್ರನ ನಿಜದೂತ

ಯಾಮ ಯಾಮಕೆ ನಿನ್ನಾರಾಧಿಪುದಕೆ ಕಾಮಿಪೆ ಎನಗಿದು ನೇಮಿಸಿ ಪ್ರತಿದಿನ

ಈ ಮನಸಿಗೆ ಸುಖಸ್ತೋಮವ ತೋರುತ ಪಾಮರ ಮತಿಯನು ನೀ ಮಾಣಿಪುದು || 1 ||

ವಜ್ರ ಶರೀರ ಗಂಭೀರ ಮುಕುಟಧರ ದುರ್ಜನವನ ಕುಠಾರ

ನಿರ್ಜರ ಮಣಿದಯಾ ಪಾರ ವಾರ ಉದಾರ ಸಜ್ಜನರಘವ ಪರಿಹಾರ

ಅರ್ಜುನಗೊಲಿದಂದು ಧ್ವಜವಾನಿಸಿ ನಿಂದು ಮೂರ್ಜಗವರಿವಂತೆ ಗರ್ಜನೆ ಮಾಡಿದಿ

ಹೆಜ್ಜೆ ಹೆಜ್ಜೆಗೆ ನಿನ್ನ ಅಬ್ಜ ಪಾದದ ಧೂಳಿ ಮಾರ್ಜನದಲಿ ಭವ ವರ್ಜಿತನೆನಿಸೊ || 2 ||

ಪ್ರಾಣ ಅಪಾನ ವ್ಯಾನೋದಾನ ಸಮಾನ ಆನಂದ ಭಾರತಿ ರಮಣ

ನೀನೆ ಶರ್ವಾದಿ ಗೀರ್ವಾಣಾದ್ಯಮರರಿಗೆ ಜ್ಞಾನಧನ ಪಾಲಿಪ ವರೇಣ್ಯ

ನಾನು ನಿರುತದಲಿ ಏನೇನೆಸಗಿದೆ ಮಾನಸಾದಿ ಕರ್ಮ ನಿನಗೊಪ್ಪಿಸಿದೆನೊ

ಪ್ರಾಣನಾಥ ಸಿರಿವಿಜಯವಿಠಲನ ಕಾಣಿಸಿ ಕೊಡುವದು ಭಾನು ಪ್ರಕಾಶ || 3 ||